reasons for him to authorise the DIG (Intelligence) to write to the Post Offices in the manner in which it has been printed in the Indian Express (dt. 24-6-81).

SRI R. GUNDU RAO.—Sir, I will make a statement in this behalf in another five minutes, It is very nice that the hon. Member has raised this matter.

## CALLING ATTENTION TO MATTERS OF URGENT PUBLIC IMPORTANCE

*re: Loss Caused to sericulturist due to Uji fly menace.*

ಶ್ರೀ ಜಿ. ರಾಜೂಗೌಡ.—ರಾಜ್ಯದಲ್ಲಿ ಊಜಿ ನೊಣದ ಹಾವಳಿಯಿಂದಾಗಿ ರೇಷ್ಮೆ ಉದ್ಯಮಕ್ಕೆ ತಗಲಿರುವ ಪೆಟ್ಟಿನ ಬಗ್ಗೆ ನಾನು ಮಾನ್ಯ ಮುಖ್ಯ ಮಂತ್ರಿಗಳ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ —(ಮಾನ್ಯ ಅರ್ಥ ಮಂತ್ರಿಗಳು) ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ ನಾನು ಈ ಹೇಳಿಕೆಯನ್ನು ಮಾಡಲಿದ್ದೇನೆ.

ರೇಷ್ಮೆ ಹುಳುಗಳನ್ನು ಆವಲಂಬಿಸಿರುವ ಊಜಿ ನೊಣವು ಹುಳುಗಳನ್ನೂ ಮತ್ತು ರೇಷ್ಮೆ ಗೂಡು ಗಳನ್ನು ಹಾಳು ಮಾಡುವ ಒಂದು ಆಂತಕಕಾರಿ ಕೀಟ. ಪಶ್ಚಿಮ ಬಂಗಾಳದಲ್ಲಿ ಈ ನೊಣ ಸಾಮಾನ್ಯ ಕಂಡು ಬರುವುದಾದರೂ ಭಾರತದ ರೇಷ್ಮೆ ಉತ್ಪಾದನೆಯಲ್ಲಿ ಅಗ್ರಸ್ಥಾನದಲ್ಲಿರುವ ಕರ್ನಾಟಕದಲ್ಲಿ ಇದು ಇದುವರೆಗೂ ಕಂಡಿರಲಿಲ್ಲ. ೧೯೮೦ ಮೇ ತಿಂಗಳಿನಲ್ಲಿ ಪ್ರಥಮ ಬಾರಿಗೆ ಇದನ್ನು ಇಲಾಖೆಯು ಗಮನಿಸಿತು. ನಂತರ ಸಂಶೋಧನಾಧಿಕಾರಿಗಳೂ ಸಹ ಖಚಿತಪಡಿಸಿದರು. ಈ ನೊಣವು ಪ್ರಥಮ ಬಾರಿಗೆ ಕಂಡು ಬಂದ ಸ್ಥಳವಾದ ಬೆಂಗಳೂರು ಜಿಲ್ಲೆಯ ಹೊಸಕೋಟೆ ತಾಲ್ಲೂಕು ಬೈಲನರಸಾಪುರ ಗ್ರಾಮವನ್ನು ಕೇಂದ್ರವಾಗಿಟ್ಟುಕೊಂಡು ಹತ್ತು ಮೈಲು ಫಾಸಲೆಯಲ್ಲಿ ನಿಯಂತ್ರಣ ಕಾರ್ಯವನ್ನು ಕೈಗೊಳ್ಳಲು ಪ್ರತ್ಯೇಕ ದಳಗಳನ್ನು ರಚಿಸಲಾಯಿತು. ಮುಂದೆ ಇದನ್ನು ೨೦ ಮೈಲು ಫಾಸಲೆವರೆಗೂ ವಿಸ್ತರಿಸಲಾಯಿತು.

ಈ ಪ್ರದೇಶಗಳಲ್ಲಿ ಬರುವ ಗ್ರಾಮದ ರೈತರ ಮನೆಗಳಿಗೆ ಬಿಹೆಚ್‌ಸಿ ದ್ರಾವಣ ಸಿಂಪರಣೆಯನ್ನು ಕೇಂದ್ರ ರೇಷ್ಮೆ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯವರ ಸಲಹೆಯಂತೆ ಕೈಗೊಳ್ಳಲಾಯಿತು.

ಊಜಿ ನೊಣದ ಇರುವಿಕೆಯ ಸುಳಿವು ಸಿಕ್ಕಾಗಲೆಲ್ಲ ಈ ಪ್ರದೇಶಗಳ ರೈತರು ಹುಳು ಸಾಕಣೆಯನ್ನು ನಿಲ್ಲಿಸುವಂತೆ ಕೋರಲಾಯಿತು. ಪರಿಹಾರಧನ ನೀಡಿಕೆಯ ನಂತರ ರೇಷ್ಮೆ ಬೆಳೆಗಳನ್ನು ನಾಶಪಡಿಸುವ ಕಾರ್ಯವನ್ನೂ ಸಹ ಕೈಗೊಳ್ಳಲಾಯಿತು. ಇಷ್ಟು ಮಾಡಿದಾಗ್ಯೂ ಅಲ್ಲಲ್ಲಿ ಗುಪ್ತವಾಗಿ ರೈತರು ಬೆಳೆ ಇಡಲು ಪ್ರಾರಂಭಿಸಿದರು. ಬಹುಪಾಲು ರೈತರು ಈ ನೊಣದಿಂದ ಮುಂದೆ ಉದ್ಭವಿಸುವ ಸಮಸ್ಯೆ ಮತ್ತು ತೀವ್ರ ಪರಿಣಾಮಗಳನ್ನು ಅರ್ಥಮಾಡಿಕೊಳ್ಳದೆ ನಿರೀಕ್ಷಿತ ಮಟ್ಟದಲ್ಲಿ ಇಲಾಖೆಯೊಡನೆ ಸಹಕರಿಸ ಲಿಲ್ಲ. ಊಜಿ ನೊಣದ ಹಾವಳಿಗೊಳಗಾದ ಗ್ರಾಮಗಳಲ್ಲಿ ಬೆಳೆಗಳನ್ನು ನಾಶಪಡಿಸಲು ಹೋದ ಹಲವು ಇಲಾಖಾಧಿಕಾರಿಗಳನ್ನು ರೈತರು ಛೇರಾಪ್ ಮಾಡಿದರಲ್ಲದೆ ಇಲಾಖಾ ವಾಹನಕ್ಕೂ ಬೆಂಕಿಯಿಟ್ಟರು.

ಹಲವು ವರ್ಷಗಳಿಂದಲೂ ಜಪಾನು, ದಕ್ಷಿಣ ಕೊರಿಯಾ ಮತ್ತು ಪಶ್ಚಿಮ ಬಂಗಾಳಗಳಲ್ಲಿ ಊಜಿ ನೊಣವು ಇರುವುದಾದರೂ ಇದನ್ನು ನಾಶಪಡಿಸುವ ಯಾವುದೇ ಒಂದು ಪರಿಣಾಮಕಾರಿ ಕ್ರಮವನ್ನು ಸಂಶೋಧನೆ ಮಾಡಲಾಗಿಲ್ಲ. ಈ ಕೀಟವನ್ನು ನಾಶಪಡಿಸಲು ಉಪಯೋಗಿಸುವ ಯಾವ ಕೀಟನಾಶಕವೇ ಆದರೂ ಹುಳುಗಳನ್ನು ಸಹ ನಾಶಪಡಿಸುತ್ತದೆ. ಇದರ ನಿಯಂತ್ರಣಕ್ಕೆ ವಿವಿಧ ಮೂಲಗಳಿಂದ ಕೇಳಿ ಬಂದಿರುವ ಏಕಮೇವ ಸಲಹೆ ಪಶ್ಚಿಮ ಬಂಗಾಳದ ಸಂಶೋಧನಾ ಸಂಸ್ಥೆಯವರ ಅನುಭವದ ಮೇಲೆಯೇ ಅವಲಂಬಿತವಾಗಿದೆ. ಕರ್ನಾಟಕದಲ್ಲಿ ಗೋಚರಿಸಿರುವ ಊಜಿ ನೊಣವು ಪಶ್ಚಿಮ ಬಂಗಾಳದಲ್ಲಿ ಅಸ್ತಿತ್ವ ದಲ್ಲಿರುವ ನೊಣದಂತೆಯೇ ಇದೆಯೆಂಬುದನ್ನು ಇಲ್ಲಿನ ವಿಜ್ಞಾನಿಗಳು ಧೃಡಪಡಿಸಿದ್ದಾರೆ.

ಈ ನೊಣವನ್ನು ನಿಯಂತ್ರಿಸಲು ಇಲಾಖೆಯು ಕೈಗೊಂಡಿದ್ದ ಕ್ರಮಗಳೆಂದರೆ.—

ಹಾನಿಗೊಳಗಾದ ಹುಳುಗಳನ್ನು ಆರಿಸಿ ಸುಟ್ಟು ಹಾಕುವಂತೆ ರೈತರಿಗೆ ತಿಳುವಳಿಕೆ ನೀಡಲಾಯಿತು. ಈ ಕಾರ್ಯ ನಿರ್ವಹಿಸಲು ಇಲಾಖೆಯು ರಚಿಸಿದ್ದ ಪ್ರತ್ಯೇಕ ದಳಗಳು ಸದಾಕಾಲ ಕಾರ್ಯ ನಿರತವಾಗಿದ್ದವು.

ಗೊಬ್ಬರದ ಮತ್ತು ಹುಳುಗಳ ಹಿಕ್ಕೆ ಸಂಗ್ರಹಿಸುವ ತಿಪ್ಪೆಗುಂಡಿಗಳಿಗೆ ಬಿಹೆಚ್‌ಸಿ ದ್ರಾವಣವನ್ನು ಸಿರಿಪಡಿಸಲಾಯಿತು.

ಹಾನಿಗೊಳಗಾದ ಬೆಳೆಗಳಿಗೆ ಪರಿಹಾರಧನ ನೀಡಿ ಸುಟ್ಟು ಹಾಕಲಾಯಿತು.

ಹಾನಿಗೊಳಗಾಗಿದ್ದ ಬೆಳೆಯ ರೇಷ್ಮೆ ಗೂಡುಗಳನ್ನು ಇಲಾಖೆಯು ಖರೀದಿ ಮಾಡಿ ಪಾಲಿಥೀನ್ ಚೀಲಗಳಲ್ಲಿ ಭದ್ರಪಡಿಸಿ ತಂದು ತಕ್ಷಣವೆ ಉಬ್ಬಿಕೊಡಲಾಯಿತು.

ನೊಣದ ಹಾವಳಿಗೆ ಒಳಗಾಗದ ಲಾಟ್‌ಗಳನ್ನು ಮಾತ್ರ ರೀಲರುಗಳು ಕೊಳ್ಳಬೇಕೆಂದು ಸೂಚಿಸಲಾಯಿತು.

ರಚಿತವಾಗಿದ್ದ ಪ್ರತ್ಯೇಕ ದಳಗಳು ರೀಲಿಂಗ್ ಯೂನಿಟ್‌ಗಳಿಗೆ ಭೇಟಿ ನೀಡಿ ರೀಲರುಗಳು ಕೊಂಡಿದ್ದ ಗೂಡನ್ನು ಆ ದಿನವೇ ಉಬ್ಬಿಗೆ ಒಳಪಡಿಸಿದರು.

ಹಾವಳಿಗೆ ತುತ್ತಾಗಿದ್ದ ಎಂಟು ತಾಲ್ಲೂಕುಗಳಲ್ಲಿನ ಗ್ರಾಮದ ಬೆಳೆಗಾರರ ಮನೆಗಳಿಗೆ ತಂತಿ ಜಾಲರಿ ಹೊಂದಿಸಲು ಆರ್ಥಿಕ ನೆರವು ಮಂಜೂರಾತಿ ಪಡೆಯಲಾಯಿತು. ಶೇಕಡಾ ೫೦ ರಷ್ಟು ಕೆಲಸ ಪೂರ್ಣವಾಯಿತು. ರೈತರು ಇಲಾಖೆಯಿಂದ ತಂತಿ ಜಾಲರಿಯನ್ನು ಪಡೆದುಕೊಂಡು ಸ್ಥಳೀಯ ಬಡಗಿಗಳ ನೆರವಿನಿಂದ ಅದನ್ನು ಹೊಂದಿಸಿದರು.

ಈ ಎಲ್ಲ ನಿಯಂತ್ರಣ ಕಾರ್ಯ ನಡೆಸಿದ್ದರ ಪರಿಣಾಮವಾಗಿ ೧೯೬೦ ಮೇ ನಲ್ಲಿ ಕಾಣಿಸಿಕೊಂಡ ನೊಣವನ್ನು ಹತೋಟಿಗೆ ತರಲು ಸಾಧ್ಯವಾಯಿತು. ಆದರೆ ಪೂರ್ಣ ನಿಯಂತ್ರಣ ಸಾಧ್ಯವಾಗಲಿಲ್ಲ. ದುರಾದೃಷ್ಟವಶಾತ್ ೧೯೬೧ ಮೇ ನಲ್ಲಿ ಇದರ ಹಾವಳಿ ಹೆಚ್ಚಿತು. ಈ ನೊಣಕ್ಕೆ ಇನ್ನಿತರ ಹುಳುಗಳು ಆವಾಸಸ್ಥಾನವಾಗಿವೆಯಾದ್ದರಿಂದ ರೇಷ್ಮೆ ಹುಳುಗಳನ್ನು ನಾಶಗೊಳಿಸುವುದರಿಂದ ಮಾತ್ರವೇ ಇದನ್ನು ಹತೋಟಿಗೆ ತರಲು ಸಾಧ್ಯವಿಲ್ಲವೆಂದು ವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ.

ಭಾರತದಲ್ಲಿರುವ ಸಂಶೋಧನಾ ಸಂಸ್ಥೆಯವರು ಈ ಕೀಟವನ್ನೂ ನಿರ್ಮೂಲ ಮಾಡಲು ಸೂಕ್ತ ವೈಜ್ಞಾನಿಕ ವಿಧಿವಿಧಾನಗಳನ್ನು ಇದುವರೆಗೂ ತಿಳಿಸಿಲ್ಲ. ಇದುವರೆಗೂ ವಿಜ್ಞಾನಿಗಳು ಶಿಫಾರ್ಸು ಮಾಡಿರುವ ಕ್ರಮಗಳೆಂದರೆ ಹಾನಿಗೊಳಗಾದ ಹುಳುಗಳನ್ನು ಮತ್ತು ನೊಣದ ವಿವಿಧ ಹಂತಗಳನ್ನು ನಾಶಪಡಿಸುವುದು ಮತ್ತು ಅಂತಹ ಗೂಡುಗಳ ಸಾಗಣೆಯನ್ನು ' ಪತೋಟಿಯೆಲ್ಲಿಟ್ಟುಕೊಂಡು ಬಿಸಿಗಾಳಿಯನ್ನು ಹಾಯಿಸಿ ಕೋಶಶಕ್ತಿವಿಯನ್ನು ಸಾಯುವಂತೆ ಮಾಡುವುದು ಹುಳುಸಾಕಣೆ ಮನೆಯ ಕಿಟಕಿ ಬಾಗಿಲುಗಳಿಗೆ ತಂತಿ ಜಾಲರಿಯನ್ನು ಹೊಂದಿಸಿ ಹೊರಗಿನಿಂದ ನೊಣ ಪ್ರವೇಶಿಸದಂತೆ ತಡೆ ಒಡ್ಡುವುದು. ಈ ನಿಯಂತ್ರಣ ಕಾರ್ಯಗಳನ್ನು ರಾಜ್ಯದ ರೇಷ್ಮೆ ಇಲಾಖೆಯು ಈಗಾಗಲೇ ಅಳವಡಿಸಿಕೊಂಡಿದೆ. ಸಂಶೋಧನ ಸಂಸ್ಥೆಯವರನ್ನು ವಿಶ್ವವಿದ್ಯಾನಿಲಯಗಳ ಕೀಟ ತಜ್ಞರನ್ನು ಈ ಕಾರ್ಯದಲ್ಲಿ ಅಳವಡಿಸಿಕೊಂಡು ಮುನ್ನಡೆಯುವುದು ಉತ್ತಮವೆಂದು ಮನಗಂಡ ಇಲಾಖೆಯು ೧೯೬೧ ಜೂನ್ ತಿಂಗಳಿನಲ್ಲಿ ಒಂದು ಸಭೆಯನ್ನು ಕರೆಯಿತು. ಇದರ ಹಾವಳಿಯನ್ನು ನಿಯಂತ್ರಿಸಲು ರೇಷ್ಮೆ ಹುಳುಗಳು ಮತ್ತು ಊಜಿ ನೊಣಗಳ ಮಧ್ಯೆ ಒಂದು ''ತಡೆ'' ಯನ್ನು ಒಡ್ಡಬೇಕೆಂಬ ಅಭಿಪ್ರಾಯವನ್ನು ಪುನರುಚ್ಚರಿಸಿದರು.

ವಿಜ್ಞಾನಿಗಳು ಪುನಃ.—೧೯೬೧ ಜೂನ್ ೨೯ ಕ್ಕೆ ಸಭೆ ಸೇರಿ ನಡೆಸಬೇಕಾಗಿರುವ ಸಂಶೋಧನೆ ಕಾರ್ಯಗಳ ಬಗ್ಗೆ ಚರ್ಚಿಸಿ ಅಂತಿಮ ತೀರ್ಮಾನ ಕೈಗೊಳ್ಳುವರು. ಇದರ ಹಾವಳಿಯನ್ನು ತಪ್ಪಿಸಲು ಸಂಶೋಧನಾ ಕಾರ್ಯಗಳಿಗೆ ಎಲ್ಲ ಸಹಕಾರವನ್ನು ರಾಜ್ಯ ಸರ್ಕಾರವು ನೀಡುವುದು. ರಾಜ್ಯದ ವಿವಿಧ ಭಾಗಗಳಿಂದ ಆಗಮಿಸಿದ್ದ ರೇಷ್ಮೆ ಬೆಳೆಗಾರರು, ವಿಜ್ಞಾನಿಗಳು, ಅಧಿಕಾರಿಗಳು ಒಳಗೊಂಡಂತೆ ರಾಜ್ಯ ಮಟ್ಟದ ಸಮ್ಮೇಳನವನ್ನು ೧೯೬೧ ಜೂನ್ ೧೬ ರಂದು ನಡೆಸಲಾಯಿತು. ಅನುಭವಿ ಬೆಳೆಗಾರರಿಂದ ಬಂದ ಸಲಹೆಗಳನ್ನು ಗಮನಕ್ಕೆ ತೆಗೆದುಕೊಂಡು ಪರೀಕ್ಷೆ ಮಾಡಲಾಗುತ್ತಿದೆ. ಉದಾಹರಣೆಗೆ ತಾಳೆ ಹೂವಿಗೆ ಜೇನುತುಪ್ಪ ಸವರಿ ಜೊಳ್ಳು ಹಣ್ಣನ್ನು ಜೊತೆಗೆ ಇರಿಸಿ ಕಟ್ಟುವುದು, ಪ್ರವೇಶದ್ವಾರದ ಬಳಿ ಬೆಳಕು ಚೆಲ್ಲುವ ದೀಪ ಜೋಡಿಸುವುದು.

ಊಜಿ ನೊಣ ನಿಯಂತ್ರಣಕ್ಕಾಗಿ ಈಗ ರೂಪಿತವಾಗಿರುವ ಪ್ರಮುಖ ಕಾರ್ಯಕ್ರಮಗಳೆಂದರೆ ನೊಣಗಳನ್ನು ಆಕರ್ಷಿಸಿ ಕೊಲ್ಲುವಂತಹ ಪರಿಣಾಮಕಾರಿ ಕ್ರಮಗಳನ್ನು ಸಂಶೋಧನೆಯಿಂದ ಇದುವರೆಗೂ ಪಡೆಯಲು ಸಾಧ್ಯವಾಗಿಲ್ಲ. ಈಗ ತಿಳಿದುಬಂದಿರುವ ಇತರೆ ಕ್ರಮವೆಂದರೆ ಹುಳು ಸಾಕಣೆ ಮನೆಯ ಕಿಟಕಿ ಬಾಗಿಲುಗಳಿಗೆ ತಂತಿ ಜಾಲರಿಯನ್ನು ಹೊಂದಿಸಿ ನೊಣಗಳ ಪ್ರವೇಶವನ್ನು ತಡೆಗಟ್ಟುವುದೇ ಆಗಿದೆ. ಈ ಕ್ರಮವನ್ನು ಹೆಚ್ಚಿನ ರೀತಿಯಲ್ಲಿ ಮುಂದುವರಿಸಬೇಕು.

ಸಾಲ ನೀಡಿಕೆ ಕ್ರಮವನ್ನು ಸರಳಗೊಳಿಸಿ ವಾಣಿಜ್ಯ ಬ್ಯಾಂಕುಗಳಿಂದ ಮತ್ತು ಸಹಕಾರಿ ಸಂಸ್ಥೆಗಳಿಂದ ಸಾಲ ದೊರೆಯುವಂತೆ ವ್ಯವಸ್ಥೆ ಮಾಡಲಾಗಿದೆ.

ಕರ್ನಾಟಕ ರಾಜ್ಯ ಮಾರುಕಟ್ಟೆ ಫೆಡರೇಷನ್ ಮೂಲಕ ತಂತಿ ಜಾಲರಿಯನ್ನು ಸರಬರಾಜು ಮಾಡಲು ವ್ಯವಸ್ಥೆ ಮಾಡಲಾಗಿದೆ.

ಸಂಶೋಧನಾ ಸಂಸ್ಥೆ ಮತ್ತು ವಿಶ್ವವಿದ್ಯಾನಿಲಯಗಳ ವಿಜ್ಞಾನಿಗಳನ್ನು ಈ ಬಗ್ಗೆ ಸಂಶೋಧನೆ ಕೈಗೊಳ್ಳುವಂತೆಯೂ ಮತ್ತು ಊಜಿ ನೊಣ ನಾಶ ಮಾಡುವ ಕ್ರಮಗಳನ್ನು ಸೂಚಿಸಲು ನೆರವಾಗ ಬೇಕೆಂದೂ ಕೋರಲಾಗಿದೆ.

ಊಜಿ ನೊಣದ ಹಾವಳಿ ತೀವ್ರವಾಗಿರುವ ಜಿಲ್ಲೆಗಳಲ್ಲಿ ರೇಷ್ಮೆ ಬೆಳೆಗಾರರಿಗೆ ಸೂಕ್ತ ತಿಳುವಳಿಕೆ ನೀಡಲು, ಸೋಂಕಿಗೆ ಒಳಗಾದ ಹುಳುಗಳನ್ನು ಸುಟ್ಟು ಹಾಕಲು, ನಿಯಂತ್ರಣ ಕಾರ್ಯವನ್ನು ಮುಂದುವರಿಸಲು ಪ್ರತ್ಯೇಕವಾಗಿ ೩೭ ವಿಸ್ತರಣಾ ದಳಗಳನ್ನು ರಚಿಸಲಾಗಿದೆ.

ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ರೇಷ್ಮೆ ಬೆಳೆಗಾರರ ಸಮ್ಮೇಳನ ನಡೆಯಲು ಏರ್ಪಾಡಾಗಿದೆ.

ನಿಯಂತ್ರಣ ಕಾರ್ಯಗಳನ್ನು ನಿರೂಪಿಸುವ ಕರಪತ್ರಗಳನ್ನು ಕನ್ನಡದಲ್ಲಿ ಮುದ್ರಿಸಲಾಗಿದ್ದು ರೈತರಿಗೆ ಹಂಚಲಾಗುತ್ತಿದೆ.

ಸಣ್ಣ ಮತ್ತು ಅತಿಸಣ್ಣ ರೈತರಿಗೆ ನೆರವಾಗಲು ಅವರು ತೆಗೆದುಕೊಳ್ಳುವ ಸಾಲದ ಮೊಬಲಗಿನ ಮೇಲಿನ ಬಡ್ಡಿ ದರವನ್ನು ಸರ್ಕಾರವು ಸಹಾಯಧನವಾಗಿ ನೀಡುತ್ತದೆ.

ಎಲ್ಲ ಪ್ರಮುಖ ಗೂಡಿನ ಮಾರುಕಟ್ಟೆಗಳಿಗೂ ಬಿಸಿ ಗಾಳಿಯಿಂದ ಉಬ್ಬಿ ಕೊಡುವ ಯಂತ್ರಗಳನ್ನು ಅಳವಡಿಸಲು ಪ್ರಯತ್ನ ನಡೆಸಲಾಗಿದೆ. ಇದರಿಂದ ರೀಲರುಗಳು ಕೊಂಡ ಗೂಡುಗಳನ್ನು ಉಬ್ಬಿ ಕೊಡಲು ಅನುಕೂಲ.

ರೇಷ್ಮೆ ಹುಳು ಸಾಕಣೆ ಮನೆ ನಿರ್ಮಾಣ ಮತ್ತು ದುರ್ಬಲ ವರ್ಗದ ರೈತರುಗಳಿಗೆ ಸಾಮೂಹಿಕ ಹುಳು ಸಾಕಣೆ ಮನೆ ನಿರ್ಮಾಣಕ್ಕಾಗಿ ಹಣ ಮತ್ತು ಸಹಾಯಧಾನ ಮಂಜೂರು ಮಾಡುವಂತೆ ಕೇಂದ್ರ ಸರ್ಕಾರದ ವಾಣಿಜ್ಯ ಸಚಿವಾಲಯವನ್ನು ಕೋರಲಾಗಿದೆ. ಏಕೆಂದರೆ ಬಹುಪಾಲು ಮನೆಗಳು ಗುಡಿಸಲು ಗಳಾಗಿದ್ದು ತಂತಿ ಜಾಲರಿಯನ್ನು ಹೊಂದಿಸಲು ಅನುಕೂಲಕರವಾಗಿಲ್ಲ.

ಗೂಡನ್ನು ಕೊಂಡ ದಿನವೇ ರೀಲರುಗಳು ಉಬ್ಬಿ ಕೊಡುವಂತೆ ಮಾಡಲು ೧೮ ಪ್ರತ್ಯೇಕ ದಳ ಗಳನ್ನು ರಚಿಸಲಾಗಿದೆ.

ವಿಶ್ವದ ಪ್ರಮುಖ ಕೀಟ ತಜ್ಞರಲ್ಲಿ ಒಬ್ಬರನ್ನು ಯು.ಎಸ್.ಎ. ನಿಂದ ಕರ್ನಾಟಕಕ್ಕೆ ಭೇಟಿ ನೀಡಲು ಆಹ್ವಾನಿಸಲಾಗಿದೆ.

ಹೆಚ್ಚು ಪರಿಣಾಮಕಾರಿಯಾದ ನಿಯಂತ್ರಣ ವಿಧಾನಗಳನ್ನು ಅಲ್ಪಕಾಲಾವಧಿ ಮತ್ತು ದೀರ್ಘ ಕಾಲಾವಧಿಗೆ ಸೂಚಿಸುವಂತೆ ಕೋರಿ ಸಂಶೋಧನೆಗೆ ಪ್ರೋತ್ಸಾಹಿಸಲಾಗಿದೆ.

ವಿಸ್ತರಣಾ ದಳಗಳು ಗೊಬ್ಬರದ ಗುಂಡಿ ಮತ್ತು ಹಳೆಯವಿನ ಹಿಕ್ಕೆ ಗುಂಡಿಗಳಿಗೆ ಬಿಹೆಚ್‌ಸಿ ದ್ರಾವಣ ಸಿಂಪಡಿಸುತ್ತಿದ್ದಾರೆ. ಇದರಿಂದ ನೊಣಗಳ ವಿವಿಧ ಹಂತಗಳು ನಾಶವಾಗುತ್ತವೆ.

ಮಾರುಕಟ್ಟೆಯಲ್ಲಿ ಸಂಗ್ರಹವಾಗುವ ಮೆಗ್ಗಾಟ್‌ಗಳು ಮತ್ತು ಪ್ಯೂಪಾಗಳನ್ನು ಒಂದೆಡೆ ಸೇರಿಸಿ ಬೆಂಕಿಗೆ ಹಾಕಿ ಸುಡಲಾಗುತ್ತಿದೆ.

ಸರ್ಕಾರವು ೧೩೬.೫ ಲಕ್ಷ ರೂ. ಗಳನ್ನು ನಂ. ಸಿಐ. ೯. ಎಸ್‌ಎಲ್‌ಡಬ್ಲ್ಯೂ ೮೧ ದಿನಾಂಕ ೧೬-೬-೧೯೮೧ ಆದೇಶ ಹೊರಡಿಸಿ ಮಂಜೂರು ಮಾಡಿದೆ. ಇದನ್ನು ಈ ಕೆಳಗಿನ ಬಾಬುಗಳಿಗೆ ವೆಚ್ಚ ಮಾಡಲಾಗುವುದು.

(ಎ) ಪಂಳು ಸಾಕಣೆ ಮನೆಗಳಿಗೆ ತಂತಿ ಜಾಲರಿಯನ್ನು ಹೊಂದಿಸಲು ಮಾಡುವ ಸಾಲದ ಮೇಲೆ ಬೀಳುವ ಬಡ್ಡಿ ದರವನ್ನು ಸಣ್ಣ ಮತ್ತು ಅತಿಸಣ್ಣ ರೈತರಿಗೆ ಸಹಾಯಧನವಾಗಿ ತುಂಬುವುದಕ್ಕೆ.

(ಬಿ) ಬೆಸೆಚ್‌ಸಿ ದ್ರಾವಣವನ್ನು ಕೊಳ್ಳುವುದಕ್ಕಾಗಿ.

(ಸಿ) ಗೂಡಿನ ಮಾರುಕಟ್ಟೆಯಲ್ಲಿ ಅಳವಡಿಸಲು ಬಿಸಿಗಾಳಿ ಯಂತ್ರವನ್ನು ಖರೀದಿಸುವುದಕ್ಕಾಗಿ.

(ಡಿ) ವಿಸ್ತರಣಾ ಕಾರ್ಯವನ್ನು ನಿರ್ವಹಿಸಲು ಉಪಯೋಗಿಸುವ ವಾಹನಗಳನ್ನು ಸುವ್ಯವಸ್ಥೆಯಲ್ಲಿಡುವುದಕ್ಕಾಗಿ.

(ಇ) ಕೀಟ ತಜ್ಞರನ್ನು ಆಹ್ವಾನಿಸಿ ಅವರಿಂದ ಅನುಕೂಲ ಪಡೆಯುವುದಕ್ಕಾಗಿ.

(ಎಫ್) ರೈತರ ತಿಳುವಳಿಕೆಗಾಗಿ ಸಮ್ಮೇಳನ, ಚಲನಚಿತ್ರ ಪ್ರದರ್ಶನ ಇತ್ಯಾದಿ ಕಾರ್ಯಕ್ರಮಗಳನ್ನು ವ್ಯವಸ್ಥೆಗೊಳಿಸುವುದಕ್ಕಾಗಿ.

ರೇಷ್ಮೆ ಕೃಷಿಯು ನಮ್ಮ ರಾಜ್ಯಕ್ಕೆ ಬಹುಮುಖ್ಯವಾಗಿ ಬೇಕಾಗಿರುವ ಕೃಷಿ ಪ್ರಧಾನ ಉದ್ಯಮ. ಸುಮಾರು ೪೨ ಕೋಟಿ ರೂ. ಗಳ ವಿದೇಶಿ ವಿನಿಮಯ ಗಳಿಕೆ ಇದರಿಂದಾಗುತ್ತದೆ. ಸುಮಾರು ೨೫ ಲಕ್ಷ ಕುಟುಂಬಗಳು ಇದನ್ನು ಆವಲಂಬಿಸಿವೆ. ನಮ್ಮ ರಾಜ್ಯದ ಬಹುಮುಖ್ಯ ಕೈಗಾರಿಕೆಯಾದ ಇದನ್ನು ಊಜಿ ನೊಣದ ಹಾವಳಿಯಿಂದ ರಕ್ಷಿಸಲು ಅಗತ್ಯವಾದ ಎಲ್ಲ ಕಾರ್ಯಕ್ರಮಗಳನ್ನು ಸರ್ಕಾರವು ಕೈಗೊಳ್ಳುತ್ತದೆ.

ಶ್ರೀ ಜಿ. ರಾಜುಗೌಡ (ಹನೂರು).—ಅಧ್ಯಕ್ಷರೇ ಮಾನ್ಯ ಮಂತ್ರಿಗಳು ದೀರ್ಘವಾಗಿರತಕ್ಕ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅವರೇ ಒಪ್ಪಿಕೊಂಡಿರುವ ಹಾಗೆ ೧೯೮೧ರ ಮೇ ನಲ್ಲಿ ಊಜಿ ನೊಣದ ಹಾವಳಿ ಬಂದು ೧೯೮೧ರ ಮೇ ಬಂದರೂ ಪೂರ್ಣ ತತ್ತಿಹಿಡಿಯುವುದಕ್ಕೆ ಸಾಧ್ಯವಾಗಿಲ್ಲವೆನ್ನುವುದನ್ನು ಅವರೇ ಒಪ್ಪಿಕೊಂಡಿದ್ದಾರೆ. ಯಾವ ಒಂದು ವೃತ್ತಿ ಕಲ್ಪವೃಕ್ಷ ಕಾಮಧೇನುವೆಂದು ನಮ್ಮ ರಾಜ್ಯದಲ್ಲಿ ೬ ಲಕ್ಷ ಜನ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಜೀವನವನ್ನು ನಡೆಸಿಕೊಂಡು ಬಂದಿರುತ್ತಾರೆ, ಯಾವ ಒಂದು ವೃತ್ತಿಯಿಂದ ರೇಷ್ಮೆ ಬೆಳೆಯಿಂದ ಕರ್ನಾಟಕ ವಿಶ್ವವಿಖ್ಯಾತವಾಗಿದೆ. ಅಂತಹ ಒಂದು ಕೈಗಾರಿಕೆಯಿಂದ ಅನೇಕ ಜನ (ಸಿರಿಕಲ್ಚರಲ್ ಎಕ್ಸ್‌ಪರ್ಟ್ಸ್) ರೇಷ್ಮೆ ಕೃಷಿ ಪಂಡಿತರು, ಮೇಧಾವಿಗಳು ಮತ್ತು ನಿಪುಣರು ಎಂದೆನಿಸಿಕೊಂಡಂತಹ ಜನ ಇವತ್ತು ಒಂದು ಸಣ್ಣ ಊಜಿ ನೊಣದ ಹಾವಳಿಯಿಂದ ತತ್ತರಿಸಿ ಹೋಗಿದ್ದಾರೆ. ರೇಷ್ಮೆ ಇಲಾಖೆಯ ತಜ್ಞರು, ನಿಪುಣರು ಎಂಬ ಬಿರುದನ್ನು ಹಾಕಿಕೊಂಡಿರತಕ್ಕವರು ಈ ಒಂದು ಸಣ್ಣ ಕಾರ್ಯವನ್ನು ಮಾಡಲು ಅವರ ಕೈಯಲ್ಲಿ ಆಗಿಲ್ಲ. ಈ ಊಜಿ ನೊಣದ ಹಾವಳಿ ಸುಮಾರು ೪೦ ವರ್ಷಗಳ ಹಿಂದೆ ಬಂತು, ಇದು ಪಶ್ಚಿಮ ಬಂಗಾಳದಿಂದ ಬಂತು ಎಂದರೆ ರೇಷ್ಮೆ ಇಲಾಖೆಯ ಅಧಿಕಾರಿಗಳಿಗೆ ಗೊತ್ತು. ಈ ರೋಗ ಬಂದಾಗಲೇ ರೋಗ ಹರಡದಂತೆ ಇಲಾಖೆಯವರು ಪ್ರಯತ್ನಪಟ್ಟಿದ್ದರೆ ಇವತ್ತು ರೈತ ಊಜಿ ನೋಣದ ಹಾವಳಿ ಗುರಿಯಾಗುತ್ತಿರಲಿಲ್ಲವೆಂದು ನನಗನಿಸುತ್ತದೆ. ರೋಗ ಬಂದಾಗಲೇ ಮುನ್ನೆಚರಿಕೆಯಿಂದ ತಡೆಗಟ್ಟಿದ್ದರೆ ನಿಜವಾಗಿಯೂ ಈ ವ್ಯಾಧಿಯನ್ನು ತಪ್ಪಿಸಬಹುದಾಗಿತ್ತು. ಈ ರೋಗ ನಮ್ಮ ರಾಜ್ಯಕ್ಕೆ ೧೯೮೦ರ ಮೇ ನಲ್ಲಿ ಬಂದಿಲ್ಲ ೧೯೭೯ರ ಮೇ ನಲ್ಲಿ ಬಂದಿದೆ ಎಂದು ನಾನು ತಿಳಿಸಲಿಕ್ಕೆ ಇಚ್ಛೆಪಡುತ್ತೇನೆ. ಚಿಟ್ಟೆ ಗೂಡಿನಿಂದ ಕಡೆಯುವುದಕ್ಕೆ ಮೊದಲೇ ಗೂಡನ್ನು ಬೇಯಿಸಬೇಕು ನಮ್ಮ ಕರ್ನಾಟಕ ರಾಜ್ಯದಲ್ಲಿ ಕೋಲಾರ, ಮೈಸೂರು ಮತ್ತು ಕೊಳ್ಳೇಗಾಲದಲ್ಲಿ ಬಿತ್ತನೆ ಬೀಜವನ್ನು ಸರಬರಾಜು ಮಾಡತಕ್ಕವರು ಕೆಲವರು ಇದ್ದಾರೆ. ನಮ್ಮ ರಾಜ್ಯದಲ್ಲಿ ರೇಷ್ಮೆ ಬಿತ್ತನೆ ಬೀಜ ಆಭಾವ ವಿದ್ದಂತಹ ಕಾಲದಲ್ಲಿ, ಪಶ್ಚಿಮ ಬಂಗಾಳದಿಂದ ಬಿತ್ತನೆ ಬೀಜವನ್ನು ತಂದಿರುವುದು ಇಲಾಖೆಯವರಿಗೂ ಗೊತ್ತಿದ್ದು ಗೊತ್ತಿಲ್ಲದಂತೆ ಕಾಣದೆ ಇದ್ದರು. ೧೯೭೯ರಲ್ಲೇ ಊಜಿ ನೊಣದ ಹಾವಳಿ ಇದೆ, ಅವತ್ತಿನಿಂದಲೇ ಬಿಗಿ ವರ್ತನೆಯಿಂದ ಗೂಡನ್ನು ನಿಷೇಧ ಮಾಡಿದ್ದರೆ ಈ ರೋಗವನ್ನು ತಡೆಗಟ್ಟಬಹುದಾಗಿತ್ತು. ಇದು ಸುಮಾರು ೬ಲಕ್ಷ ಜನರ ಜೀವನವನ್ನು ಹಾಳುಮಾಡಿರತಕ್ಕ ಸಮಸ್ಯೆ.

ಅಧ್ಯಕ್ಷರು.—ಯಾವ ವಿಷಯವನ್ನು ನಿಖರವಾಗಿ ಸರ್ಕಾರಕ್ಕೆ ತಿಳಿಸಬೇಕೋ ಅದನ್ನು ತಿಳಿಸಿ.

ಶ್ರೀ ಜಿ. ರಾಜುಗೌಡ.—ಅಧ್ಯಕ್ಷರೇ ಮಾನ್ಯ ಮಂತ್ರಿಗಳು ಇದು ೧೯೮೦ರ ಮೇ ನಲ್ಲಿ ಬಂತು ಹೇಳಿದರು ಅದು ಸರಿಯಲ್ಲ. ಈ ಊಜಿ ನೊಣದ ಹಾವಳಿ ೧೯೭೯ರಲ್ಲಿ ಬಂದಿದೆ ಎಂಬುದನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ. ನಾನು ಈ ವಿಷಯದ ಬಗ್ಗೆ ಮಾತನಾಡುವುದಕ್ಕೆ ಹೆಚ್ಚಿಗ ಸಮಯವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ರೇಷ್ಮೆ ಇಲಾಖೆಯವರು ನಮ್ಮ ಮುಂದೆ ಒಂದು ದೊಡ್ಡ ಪಟ್ಟಿಯನ್ನು ಇಟ್ಟಿದ್ದಾರೆ ಅವರು ಏನೇ ಮಾಡಿದರೂ ಊಜಿ ನೊಣದ ಹಾವಳಿಯನ್ನು ತಡೆಗಟ್ಟುವುದಕ್ಕೆ

ಅವರಿಗೆ ಸಾಧ್ಯವಾಗಿಲ್ಲ. ಅವರು ಹೇಳಿರುವ ಪ್ರಕಾರ ರೇಷ್ಮೆ ಹುಳು ಗೂಡು ಕಟ್ಟುವ ಮನೆಗೆ ತಂತಿ ಜಾಲರಿ ಬಿಗಿದರೆ ಒಳ್ಳೆಯದೆಂದು ಹೇಳುತ್ತಾರೆ. ಚೈನಾ ಜಪಾನ್ ದೇಶಗಳಲ್ಲಿ ರೇಷ್ಮೆ ಹುಳುಗಳನ್ನು ತೋಟಗಳಲ್ಲಿಯೇ ಬಿಟ್ಟು ಗೂಡು ಕಟ್ಟಿಸುತ್ತಾರೆ ಅವರು ತೋಟಗಳಿಗೆಲ್ಲಾ ಜಾಲರಿಯನ್ನು ಹಾಕುವುದು ಕ್ಯಾಗುತ್ತದೆಯೇ ? ಹುಳುಗಳಲ್ಲಿ ವ್ಯಾಧಿ ಇರುವಾಗ ತಂತಿ ಬಿಗಿದರೆ ಏನು ಪ್ರಯೋಜನವಾಗುವುದಿಲ್ಲ. ಅಂತಹ ಸಂದರ್ಭಗಳಲ್ಲಿ ತಕ್ಷಣ ಗೂಡನ್ನು ಬೇಯಿಸಿ ಹುಳುವನ್ನು ಬೇರ್ಪಡಿಸಬೇಕು. ೧೩೬ ಲಕ್ಷ ರೂಪಾಯಿ ಇದಕ್ಕೋಸ್ಕರ ಖರ್ಚು ಮಾಡುತ್ತೇವೆಂದು ಹೇಳಿಕೊಂಡು ಸುಮ್ಮನೆ ಕುಳಿತುಕೊಂಡರೆ ಆಗುವುದಿಲ್ಲ. ಈ ರೋಗ ಕಂಡ ತಕ್ಷಣ ಪರಿಪೂರ್ಣವಾಗಿ ಹತೋಟಿಗೆ ತರಲು ಅಲ್ಲಿನ ಅಧಿಕಾರಿಗಳು ಮನಸಾರೆ ಕೆಲಸ ಮಾಡಬೇಕು. ಈ ರೋಗವನ್ನು ತಡೆಗಟ್ಟಬೇಕಾದರೆ ಸರ್ಕಾರ ಮತ್ತು ಖಾಸಗೀಯವರು ಇಬ್ಬರು ಕೂಡಿ ಕೆಲಸ ಮಾಡಿದರೆ ಈ ರೋಗವನ್ನು ಪೂರ್ಣವಾಗಿ ತಡೆಗಟ್ಟಲು ಸಾಧ್ಯ. ಬರೀ ಸಭೆ ಪ್ರಚಾರಗಳಿಂದ ಏನು ಆಗುವುದಿಲ್ಲ. ಊಜಿ ನೊಣದ ಹಾವಳಿಯನ್ನು ತಡೆಗಟ್ಟಲು ಹೊರದೇಶದವರನ್ನು ಕರೆಸಿಕೊಂಡು ಅವರ ಸಲಹೆ ಸಹಕಾರ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದಾರೆ, ಅಲ್ಲಿಯವರೆಗೂ ಏನು ಮಾಡುವುದು? ಇದು ಹೇಗಾಗಿದೆ ಎಂದರೆ ಸೆರಗಿನಲ್ಲಿ ಬೆಂಕಿಯನ್ನು ಕಟ್ಟಿಕೊಂಡು ನಿದ್ದೆ ಮಾಡಿದ ಹಾಗೆ ಆಗುತ್ತದೆ. ಈ ರೋಗವನ್ನು ತಡೆಗಟ್ಟಬೇಕಾದರೆ ನನ್ನ ಅನುಭವದ ಸಲಹೆ ಏನೆಂದರೆ ಕೆಲವು ತಿಂಗಳು ಕಾಲ ರೇಷ್ಮೆ ಬೆಳೆಯನ್ನು ನಿಷೇಧಿಸಬೇಕು. ಇದರಿಂದ ರೈತರಿಗೆ ಪರಿಹಾರ ಕೊಡಬೇಕಾಗುತ್ತದೆ ಎನ್ನುವ ಸಮಸ್ಯೆ ಬಂದರೆ ರೇಷ್ಮೆ ಗೂಡು ಮಾರುಕಟ್ಟೆಗೆ ಬಂದ ತಕ್ಷಣ ಊಜಿ ನೊಣದ ಹಾವಳಿ ತಪ್ಪುವಂತೆ ತಕ್ಷಣ ಗೂಡನ್ನು ಬೇಯಿಸಿ ಹುಳುವನ್ನು ಸಾಯಿಸುವುದು, ಅದರಿಂದ ರೋಗ ಹರಡುವುದು ಕಡಿಮೆಯಾಗುತ್ತದೆ. ಈ ಮನೆಯ ಸದಸ್ಯನೇಕರು ಈ ಕಸಬನ್ನು ಮಾಡತಕ್ಕವೇ ಆಗಿರುತ್ತಾರೆ. ಸದಸ್ಯರ ಒಂದು ಸಭೆಯನ್ನು ಕರೆದು ಅವರ ಸಲಹೆಗಳನ್ನು ತೆಗೆದುಕೊಂಡು ರೇಷೆ ಬೆಳೆ ಬೆಳೆಯುವವರಿಗೆ ಸೂಕ್ತ ತಿಳುವಳಿಕೆ ಕೊಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ನಮ್ಮ ಅನೇಕ ಸಾರಿ ಈ ಪ್ರದೇಶಗಳಿಗೆ ದುಡ್ಡು ಖರ್ಚು ಮಾಡಿ ನಮ್ಮ ಅಧಿಕಾರಿಗಳನ್ನು ಕಳುಹಿಸಿ ಕೊಟ್ಟಿದ್ದಾರೆ. ಅವರು ಏನು ಮಾಡಿದ್ದಾರೆ ಹೇಳಿ. ಬರೇ ದುಡ್ಡು ಖರ್ಚಾಯಿತೇ ವಿನಾ ಇದರಿಂದ ಈ ಉದ್ಯಮಕ್ಕೇನೂ ಪ್ರಯೋಜನ ಮಾಡುವುದಕ್ಕಾಗಲಿಲ್ಲಾ. ಆದುದರಿಂದ ಈ ಸಂದರ್ಭದಲ್ಲಿ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ತಾವು ಈವೊತ್ತಿನ ದಿವಸ ಖಾಸಗೀ ಮುಂಖಂಡರನ್ನೂ ಮತ್ತು ನಮ್ಮ ಅಸೆಂಬ್ಲಿ ಸದಸ್ಯರು ಏನು ಇದ್ದಾರೋ ಅವರನ್ನೂ ಕರೆಸಿ, ಅವರನ್ನೆಲ್ಲಾ ಒಂದೆಡೆ ಸೇರಿಸಿ ಇದರ ಬಗ್ಗೆ ಕೂಲಂಕುಷವಾಗಿ ಚರ್ಚೆ ಮಾಡಿ ಅವರು ಏನೇನು ಇದರ ಬಗ್ಗೆ ಸಲಹೆಗಳನ್ನು ಕೊಡುತ್ತಾರೋ ಅದನ್ನೂ ತೆಗೆದುಕೊಂಡು ಇದರಿಂದ ಏನು ಪ್ರಯೋಜನವಾಗುತ್ತದೋ ಅದನ್ನೂ ಅರಿತು ಕೊಂಡು ಈ ಊಜಿ ನೊಣದ ಹಾವಳಿಯನ್ನು ತಡಗಟ್ಟುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು. ಇದನ್ನು ಆದಷ್ಟು ಬಗ್ಗೆ ತಡಗಟ್ಟುವಂತೆ, ಒಂದು ಹತೋಟಿಯಲ್ಲಿಟ್ಟುಕೊಳ್ಳುವುದಕ್ಕೆ ಆದಷ್ಟು ಬೇಗನೆ ಒಂದು ಸಭೆಯನ್ನು ಕರೆಯಬೇಕೆಂದು ನಾನು ಮತ್ತೊಮ್ಮೆ ಕೇಳಿಕೊಂಡು ನನ್ನ ಮಾತನ್ನು ಮುಂಗಿಸುತ್ತೇನೆ.

ಶ್ರೀ ಎಂ. ವೀರಪ್ಪಮೊಯ್ಲಿ (ಹಣಕಾಸಿನ ಮಂತ್ರಿಗಳು). - ೧೯೭೯ನೇ ಇಸವಿಯಲ್ಲೇ ಈ ಕಕೂನ್ ನಲ್ಲಿ ಬರುವಂಥಾ ಊಜಿ ನೊಣದ ಪರಿಣಾಮವನ್ನು ಗುರುತಿಸಿದ್ದೇವೆ. ಮಂತ್ತು ಮೇ ೧೯೮೦ರಲ್ಲಿ ಈ ಸಿಲ್ಕ್ ವರ್ಮ್‌ನಲ್ಲೂ ಕೂಡ ಇನ್‌ಫೆಕ್ಷನ್ ಆಗಿರುವುದನ್ನು ಗುರುತಿಸಿದ್ದೇವೆ. ಕಳೆದ ವರ್ಷ ಕನ್ನಡದಲ್ಲಿ ಈ ಬಗ್ಗೆ ಸ್ಟೇಟ್‌ಮೆಂಟ್ ಮಾಡಿದಾಗ ಇದನ್ನು ತಡೆಗಟ್ಟುವುದಕ್ಕಾಗಿ ೮ ಲಕ್ಷ ರೂಪಾಯಿ ಖರ್ಚು ಮಾಡಿದೆ ಅಂತ ಏನು ಇತ್ತು ಅದನ್ನು ೮೦ ಲಕ್ಷ ಅಂತ ತಿಳಿದುಕೊಳ್ಳಬೇಕು ಅಂತ ಕೇಳುತ್ತೇನೆ. ನಾವು ಇದನ್ನು ತಡೆಗಟ್ಟುವುದಕ್ಕಾಗೆನೇ ೮೦ ಲಕ್ಷ ರೂಪಾಯಿಯನ್ನು ಈಗಾಗಲೇ ಖರ್ಚು ಮಾಡಿದೆ. ಇದರಲ್ಲಿ ಮೂಲ ಭೂತವಾಗಿ ಹೇಳಬೇಕಾದರೆ ಜಪಾನ್‌ನಿಂದ ಬಂದಿರತಕ್ಕಂಥಾ ಊಜಿ ನೊಣಕ್ಕೂ, ಇಲ್ಲಿ ಸಿಲ್ಕ್ ವರ್ಮ್ ಮೇಲೆ ಬರತಕ್ಕಂಥಾ ಊಜಿ ನೊಣಕ್ಕೂ ವ್ಯತ್ಯಾಸ ಇದೆ. ಜಪಾನ್‌ನಲ್ಲಿ ಮಲ್ಬರಿ ಎಲೆಗಳ ಮೇಲೆ ಈ ಊಜಿ ನೊಣ ಬರುತ್ತದೆ, ಇಲ್ಲಿ ಸಿಲ್ಕ್ ವರ್ಮ್ ಮೇಲೆ ಬರುತ್ತದೆ. ಇಲ್ಲಿ ಜಪಾನ್‌ನಿಂದ ಬರತಕ್ಕಂಥಾ ಊಜಿ ನೊಣವನ್ನು ತಡೆಗಟ್ಟುವುದಕ್ಕೆ ಬರುವುದಿಲ್ಲ. ಆ ಬಗ್ಗೆ ಸಾಕಷ್ಟು ಕೆಲಸ ಈಗಾಗಲೇ ನಡೆದಿದೆ. ಕೇಂದ್ರ ರೇಷ್ಮೆ ಸಂಶೋಧನಾ ಸಂಸ್ಥೆಯವರು ಜೀವಶಾಸ್ತ್ರದ ಮುಖಾಂತರ ಅಧ್ಯಯನ ಮಾಡಿ ಇದನ್ನು

ಯಾವ ರೀತಿಯಾಗಿ ಅನ್ವಯಿಸಿದರೆ ಅನುಕೂಲವಾಗುತ್ತದೆ ಎಂಬುದನ್ನು ಕಂಡುಹಿಡಿಯುತ್ತಿದ್ದಾರೆ. ಇದುವರೆಗೆ ಯಾವರೀತಿಯಾದ ಉಪಾಯವನ್ನೂ ಸರಿಯಾಗಿ ಸೂಚಿಸಿಲ್ಲ, ಇನ್ನೂ ಅಧ್ಯಯನ ಮಾಡುತ್ತಿದ್ದಾರೆ. ಇದರ ಜೊತೆಗೆ ನಾವೂ ಕೂಡ ಅಧ್ಯಯನ ಮಾಡುತ್ತಿದ್ದೇವೆ. ಇದಲ್ಲದೆ ನಮ್ಮ ಯೂನಿವರ್ಸಿಟಿ ಯರತಕ್ಕಂಥಾ ಅನೇಕ ವಿಜ್ಞಾನಿಗಳನ್ನೂ ಕೂಡ ಈ ತಿಂಗಳು ೨೯ನೇ ತಾರೀಖು ಇದರ ಬಗ್ಗೆ ವಿಚಾರ ಮಾಡಲಿಕ್ಕೆ ಕರೆದಿದ್ದೇವೆ. ಇದನ್ನು ಜೀವಶಾಸ್ತ್ರದ ಮೂಲಕ ಯಾವ ರೀತಿಯಾಗಿ ಮೂಲೋತ್ಪಾದನೆ ಮಾಡಬಹುದು ಎನ್ನುವುದನ್ನು ಕಂಡುಹಿಡಿಯುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಇದನ್ನು ಯಾವ ತಾಂತ್ರಿಕ ವಿಧಾನಗಳಿಂದ ತಡೆಗಟ್ಟುವುದಕ್ಕೆ ಸಾಧ್ಯ ಇದೆ ಅನ್ನುವುದನ್ನು ಕಂಡುಹಿಡಿಯುತ್ತಿದ್ದೇವೆ. ಅಲ್ಲದೇ ಕೇಂದ್ರ ಸರ್ಕಾರದವರೂ ಕೂಡ ಇದನ್ನು ಶಾಶ್ವತವಾಗಿ ತಡೆಗಟ್ಟುವುದಕ್ಕೆ ಯಾವ ರೀತಿಯಾದ ಉಪಾಯ ಕಂಡುಹಿಡಿಯಬೇಕು ಅನ್ನುವ ಬಗ್ಗೆ ಪ್ರಯತ್ನ ಮಾಡುತ್ತಿದ್ದಾರೆ. ಏತಕ್ಕೆಂದರೆ ಪೇಸ್ಟ್ ಬೆಂಗಳೂರಿನಲ್ಲಿ ಇದು ಸಾಕಷ್ಟು ಇರುವುದರಿಂದ ಈ ಊಜಿ ನೊಣದ ಹಾವಳಿಯನ್ನು ಶಾಶ್ವತವಾಗಿ ಮೂಲೋತ್ಪಾಟನೆ ಮಾಡುವುದಕ್ಕೆ ತಕ್ಕ ಕಾರ್ಯಕ್ರಮಗಳನ್ನು ಅವರು ಕೈಗೊಳ್ಳುತ್ತಿದ್ದಾರೆ. ನಮ್ಮ ಕರ್ನಾಟಕದಲ್ಲಿ ಹೇಳಬೇಕಾದರೆ ನೂರಕ್ಕೆ ೯೦ ಭಾಗ ಜನರು ಖಾಸಗಿಯಾಗಿ ಅವರವರ ಮನೆಯಲ್ಲೇ ಬಡ ವರು ಮತ್ತು ಇತರರು ಈ ರೇರಿಂಗ್ ಹೌಸ್ ಅನ್ನು ಇಟ್ಟುಕೊಂಡಿದ್ದಾರೆ. ಇದರಿಂದ ಅವರಿಗೆ ಇದರ ಪರಿಹಾರವನ್ನು ಕಂಡು ಹಿಡಿಯಲು ಸಾಕಷ್ಟು ಅವಕಾಶ ಸಿಗುತ್ತದೆ. ಆದುದರಿಂದ ಇದಕ್ಕೆ ಸರಿಯಾದಂಥಾ ರೇರಿಂಗ್ ಹೌಸನ್ನು ಮಾಡಬೇಕಾಗುತ್ತದೆ. ಸಾಧ್ಯವಾದರೆ ಕಾಮನ್ ರೇರಿಂಗ್ ಹೌಸ್ ಅನ್ನು ಮಾಡ ಬೇಕಾಗುತ್ತದೆ. ಖಾಸಗಿಯವರು ಇದನ್ನು ಮಾಡದೇ ಹೋದರೆ ಈ ಊಜಿ ನೊಣದ ಹಾವಳಿಯನ್ನು ಯಶಸ್ವಿಯಾಗಿ ತಡೆಗಟ್ಟುವುದಕ್ಕೆ ಕಷ್ಟವಾಗುತ್ತದೆ. ಇದನ್ನು ಆಯಾಯ ಪ್ರದೇಶದವರು ಆಯಾಂ ಕಸಬನ್ನು ಅವಲಂಬಿಸಿರುವವರು ಪ್ರೋತ್ಸಾಹ ಕೊಟ್ಟು ಮಾಡಬೇಕು. ಇದಕ್ಕಾಗಿ ಸರ್ಕಾರದವರು ಸುಮಾರು ೧೨೫ ಕೋಟಿ ರೂಪಾಯಿಗಳು ಐದು ವರ್ಷದ ಒಂದು ಯೋಜನೆಯನ್ನು ಪಾಕಿ ಕೇಂದ್ರ ಸರ್ಕಾರಕ್ಕೆ ಈಗಾಗಲೇ ತಲುಪಿಸಿದ್ದೇವೆ. ಈ ೧೨೫ ಕೋಟಿ ರೂಪಾಯಿಯಲ್ಲಿ ೨೫ ಕೋಟಿ ರೂಪಾಯಿ ಗಳನ್ನು ಈಗಲೇ ತೀವ್ರತರವಾಗಿ ಅಲ್ಲಲ್ಲಿ ರೇರಿಂಗ್ ಹೌಸ್ ಅನ್ನು ಕಟ್ಟಲಿಕ್ಕೆ ಅವಕಾಶ ಮಾಡಿಕೊಡಬೇಕು ಎನ್ನುವ ಒಂದು ಬೇಡಿಕೆಯನ್ನು ಕೇಂದ್ರ ಸರ್ಕಾರದ ವಾಣಿಜ್ಯ ಮಂತ್ರಿಗಳ ಮುಂದೆ ಇಟ್ಟಿದ್ದೇವೆ. ಈ ಬೇಡಿಕೆಯನ್ನು ತ್ವರಿತವಾಗಿ ಮಂಜೂರು ಮಾಡಿಕೊಡಬೇಕು ಎಂದು ಎಂದು ಈಗಾಗಲೇ ಅವರನ್ನು ಕೇಳಿ ಕೊಂಡಿದ್ದೇವೆ. ಊಜಿ ನೊಣದ ಹಾವಳಿಯನ್ನು ಯಾವರೀತಿಯಾಗಿ ಶಾಶ್ವತವಾಗಿ ಎದುರಿಸಬೇಕು ಮತ್ತು ಈ ಒಂದು ಉದ್ಯಮದ ಉತ್ಪತ್ತಿಯಲ್ಲಿ ಬರತಕ್ಕಂಥಾ ಈ ತೊಂದರೆಯನ್ನು ಯಾವರೀತಿಯಾಗಿ ಎದುರಿಸಬೇಕು ಅನ್ನುವುದಕ್ಕೆ ಈಗಾಗಲೇ ಸುಮಾರು ೧೫೬ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿ ದ್ದೇವೆ. ನಾವು ಈ ಬಗ್ಗೆ ಸಾಕಷ್ಟು ಕ್ರಮಗಳನ್ನು ಕೈಗೊಂಡಿದ್ದೇವೆ. ಸಾಧ್ಯವಾದರೆ ಈ ಜೀವಶಾಸ್ತ್ರ ದಲ್ಲೂ ಕೂಡ ಜೆನ್ನಾಗಿ ಅಧ್ಯಯನ ಮಾಡಿ ಇದರ ಮೂಲೋತ್ಪಾದನೆಯನ್ನು ಶಾಶ್ವತವಾಗಿ ಇದರ ಹಾವಳಿಯನ್ನು ತಡೆಗಟ್ಟಲು ಸಾಕಷ್ಟು ಕ್ರಮಗಳನ್ನು ಕೈಗೊಳ್ಳುತ್ತೇವೆ. ಏತಕ್ಕೆಂದರೆ ಈ ರೇಷ್ಮೆ ಉದ್ಯಮ ನಮ್ಮ ಕರ್ನಾಟಕ ರಾಜ್ಯದಲ್ಲಿ ಒಂದು ಪ್ರಮುಖವಾಗಿರತಕ್ಕಂಥಾ ಉದ್ಯಮವಾಗಿದೆ. ಅಲ್ಲದೆ ಈ ಉದ್ಯಮ ಜೆನ್ನಾಗಿ ಬೆಳೆದುಕೊಂಡು ಹೋಗುವುದಕ್ಕೆ ಈ ಊಜಿ ನೊಣದ ಹಾವಳಿಯನ್ನು ಯಾವ ರೀತಿಯಾಗಿ ಶಾಶ್ವತವಾಗಿ, ಸಂಪೂರ್ಣವಾಗಿ, ತಡೆಗಟ್ಟುವುಕ್ಕೆ ಸರ್ಕಾರದ ಎಲ್ಲಾ ರೀತಿಯ ಕಾರ್ಯಕ್ರಮ ಗಳನ್ನೂ ತೆಗೆದುಕೊಂಡಿದೆ ಅನ್ನುವುದನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದರ ಜೊತೆಗೆ ರೇಷ್ಮೆ ಬೆಳೆಗಾರರೂ ಸಹ ನಮಗೆ ಸಹಾಯ ಮಾಡಬೇಕು ಈ ಸ್ಟೇಟ್‌ಮೆಂಟ್‌ನಲ್ಲಿ ಹೇಳಿದ್ದೇನೆ, ಏನೆಂದರೆ ಜೀಪನ್ನು ಸುಟ್ಟು ಹಾಕಿದ್ದಾರೆ ಇತ್ಯಾದಿಯಾಗಿ ಎಂದು. ಅದಕ್ಕೋಸ್ಕರ ನಾನು ತಮ್ಮಲ್ಲಿ ಮತ್ತೊಮ್ಮೆ ಮನವಿ ಮಾಡಿಕೊಳ್ಳುತ್ತೇನೆ, ಈ ಸದನದ ಸದಸ್ಯರು ಈ ರೇಷ್ಮೆ ಬೆಳೆಗಾರರಿಗೂ ಈ ಉದ್ಯಮದಲ್ಲಿ ನಿರತರಾಗಿರುವವರೆಲ್ಲರಿಗೂ ಕೂಡ ಒಂದು ತಿಳುವಳಿಕೆ ಕೊಟ್ಟು ಸರ್ಕಾರಕ್ಕೆ ಸಂಪೂರ್ಣ ಬೆಂಬಲ ಕೊಟ್ಟು ಈ ಊಜಿ ನೊಣದ ಹಾವಳಿಯನ್ನು ತಡೆಗಟ್ಟಲಿಕ್ಕೆ ತಕ್ಕ ಪ್ರೋತ್ಸಾಹ ಮತ್ತು ಸಹಾಯ ನೀಡಬೇಕೆಂದು ಮಾನ್ಯ ಅಧ್ಯಕ್ಷರ ಮುಖಾಂತರ ಈ ಸದನದ ಸದಸ್ಯರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ರಾಜೂಗೌಡ.—ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಏನು ಹೇಳಿದರು ಈ ಊಜಿ ನೊಣದ ಹಾವಳಿಯನ್ನು ಸಂಪೂರ್ಣವಾಗಿ ತಡೆಗಟ್ಟುವುದಕ್ಕಾಗಿ ೫ ವರ್ಷದ ಒಂದು ಯೋಜನೆಯ ಮುಖಾಂತರ ೧೨೫ ಕೋಟಿ ರೂಪಾಯಿಯ ಒಂದು ಬೇಡಿಕೆಯನ್ನು ಕೇಂದ್ರ ಸರ್ಕಾರದ ಮುಂದೆ ಇಟ್ಟಿದ್ದೇವೆ. ಆ ಮುಖಾಂತರ ಇದರ ಹಾವಳಿಯನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂದು.

ನೀವು ಈ ೧೨೫ ಕೋಟಿ ರೂಪಾಯಿಯನ್ನು ಖರ್ಚು ಮಾಡಿದಾಗಲೂ ಕೂಡ ಒಂದು ವೇಳೆ ಈ ರೋಗದ ಹಾವಳಿಯನ್ನು ತಡೆಗಟ್ಟುವುದಕ್ಕೆ ಸಮರ್ಥರಾಗದಾಗ ಆವಾಗ ಎರಡು ಕಡೆಯೂ ನಷ್ಟವಾಗುತ್ತದೆ. ಒಂದು ಕಡೆ ದುಡ್ಡು ನಷ್ಟವಾಗುತ್ತದೆ, ಇನ್ನೊಂದು ಕಡೆ ಮಾಡಿರತಕ್ಕಂಥಾ ಪ್ರಯತ್ನಗಳೆಲ್ಲಾ ನಿಷ್ಫಲ ವಾಗುತ್ತದೆ. ಆದುದರಿಂದ ನಾನು ಹೇಳುವುದೇನೆಂದರೆ ಆರು ತಿಂಗಳ ಕಾಲ ಇದರ ಒಂದು ಬೆಳೆಯನ್ನೇ ಸಂಪೂರ್ಣವಾಗಿ ನಿಲ್ಲಿಸಿಬಿಟ್ಟರೆ ಬಹಳ ಅನುಕೂಲವಾಗುತ್ತದೆ. ಅದಕ್ಕೆ ನನ್ನ ಸಲಹೆ ಏನೆಂದರೆ ತಾವು ಈ ರೋಗದ ಹಾವಳಿಯನ್ನು ತಡೆಗಟ್ಟುವುದಕ್ಕೆ ೧೨೫ ಕೋಟಿ ರೂಪಾಯಿಯ ಒಂದು ಯೋಜನೆ ಹಾಕಿದ್ದೀರಿ, ನಮ್ಮ ರಾಜ್ಯದಲ್ಲಿ ಈ ಬೆಳೆ ಬೆಳೆಯುವವರ ಭೂಮಿ ೨ ಲಕ್ಷ ೬೦ ಸಾವಿರ ಎಕರೆಯಾಗುತ್ತದೆ. ಅವರಿಗೆಲ್ಲಾ ಶೇಕಡ ೫೦ ಭಾಗದಷ್ಟು ಪರಿಹಾರ ಕೊಟ್ಟು ಒಟ್ಟು ೬ ತಿಂಗಳು ಕಾಲ ಇದರ ಬೆಳೆಯನ್ನೇ ಸಂಪೂರ್ಣವಾಗಿ ನಿಲ್ಲಿಸಿಬಿಟ್ಟರೆ ಆವಾಗ ಏನಾದರೂ ಕೂಡ ಇದರ ಮೂಲೋತ್ಪಾದನೆ ಮಾಡುವುದಕ್ಕೆ ಸಾಧ್ಯ ಇದೆ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆ ಇದರ ಸಮಸ್ಯೆ ಏನು ಅನ್ನುವುದು ನಿಮಗೆ ಇನ್ನೂ ಕೂಡ ಅರ್ಥವಾಗುತ್ತಾ ಇಲ್ಲಾ. ಈ ರೇಷ್ಮೆ ಮೇಲೆ ಬರತಕ್ಕಂಥಾ ಊಜಿ ನೊಣಕ್ಕೂ ಬೇರೆ ಬೇರೆ ರೀತಿಯಾಗಿ ಬರತಕ್ಕಂಥಾ ಕ್ರಿಮಿಗಳಿಗೂ ವ್ಯತ್ಯಾಸ ಇದೆ. ಅದನ್ನು ತಾವು ಇನ್ನೂ ಸರಿಯಾಗಿ ಕಂಡು ಹಿಡಿದಿಲ್ಲ. ಇದು ಹೇಗೆ ಬರುತ್ತದೆ ಅನ್ನುವುದನ್ನು ಮೊದಲು ಕಂಡು ಹಿಡಿಯಬೇಕು. ಆದುದರಿಂದ ನಾನು ಹೇಳುವುದೇನೆಂದರೆ ಮೊದಲು ನಾನು ಹೇಳಿದ ಹಾಗೆ ಎರಡೂ ಮನೆಯ ಸದಸ್ಯರನ್ನು ಒಂದು ಕಡೆ ಸೇರಿಸಿದರೆ ಇದರ ಬಗ್ಗೆ ನಮಗೆ ತಿಳಿದುದನ್ನು ಕೂಲಂಕುಷವಾಗಿ ಪ್ರಸ್ತಾಪ ಮಾಡಿ ಸಲಹೆಗಳನ್ನು ಕೊಡಬಹುದು. ತಮಗೆ ಹೇಳಬೇಕಾದರೆ ಇದರ ಬಗ್ಗೆ ಹೇಳಲು ಇನ್ನೂ ಅನೇಕ ವಿಷಯಗಳು ಇವೆ, ಅವೆಲ್ಲವನ್ನೂ ಈಗ ಹೇಳಲಿಕ್ಕಾಗಿಲ್ಲಾ. ಅದಕ್ಕಾಗಿ ತಾವು ಕೂಡಲೇ ಒಂದು ಸಭೆಯನ್ನು ಕರೆದು ಕೂಲಂಕುಷವಾಗಿ ಚರ್ಚಿಸಿದರೆ ಈ ಎರಡೂ ಮನೆಯ ಸದಸ್ಯರ ಅಭಿಪ್ರಾಯಗಳು ಏನು ಇವೆ ಅವರ ಭಾವನೆಗಳು ಏನು ಇವೆ ಅವರ ಸಲಹೆಗಳು ಏನು ಇವೆ ಅವೆಲ್ಲವನ್ನೂ ತಮಗೆ ಹೇಳುವುದಕ್ಕೆ ಅನುಕೂಲವಾಗುತ್ತದೆ. ಆ ರೀತಿ ಮಾಡುತ್ತೀರಾ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಸದಸ್ಯರು ಈಗ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಅದನ್ನು ಪರಿಶೀಲನೆ ಮಾಡೋಣ. ಯಾವ ರೀತಿಯಾಗಿ ಇದರ ಬಗ್ಗೆ ಕ್ರಮ ತೆಗೆದು ಕೊಳ್ಳಬೇಕೆನ್ನುವುದೂ ನಮಗೂ ಸಹ ಕಳಕಳಿ ಇದೆ. ಮಾನ್ಯ ಸದಸ್ಯರು ಹೇಳಿದಂತೆ ಮಾನ್ಯ ಸದಸ್ಯರನ್ನೂ ಕರೆಸಿ ಸಲಹೆಗಳನ್ನು ತೆಗೆದುಕೊಳ್ಳುತ್ತೇನೆ. ಅದೇ ರೀತಿಯಾಗಿ ಈ ರೇಷ್ಮೆ ಬೆಳೆಗಾರರನ್ನೂ ಸಹ ಕರೆಸಿ ಅವರ ಸಲಹೆಗಳನ್ನು ಸಹ ತೆಗೆದುಕೊಳ್ಳುತ್ತೇನೆ. ಎಲ್ಲೆಲ್ಲಿರೇಷ್ಮೆ ಬೆಳೆಗಾರರು ಇದ್ದಾರೆಅವರನ್ನೂ, ಎಲ್ಲಾ ಜಿಲ್ಲೆಗಳ ಸದಸ್ಯರನ್ನೂ ಕೂಡ ಕರೆಸಿ ಇದರ ಬಗ್ಗೆ ಮಾತುಕತೆ ನಡೆಸುತ್ತೇನೆ. ಮಾನ್ಯ ಸದಸ್ಯರು ಈ ಬಗ್ಗೆ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಅವರು ಹೇಳಿದ ಹಾಗೆ ಇದು ಒಂದು ದೊಡ್ಡ ಸಮಸ್ಯೆಯಾಗಿದೆ. ಮೇಲಾಗಿ ಅವರುಗಳು ಹೇಳತಕ್ಕಂಥಾ ಸಲಹೆಗಳನ್ನೂ ಕೂಡ ನಾನು ಸ್ವೀಕಾರ ಮಾಡುವುದಲ್ಲದೆ ಅವರುಗಳೂ ಸಹ ಇದಕ್ಕೆ ತಮ್ಮ ಸಂಪೂರ್ಣ ಬೆಂಬಲ ಮತ್ತು ಪ್ರೋತ್ಸಾಹ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇದಕ್ಕೆ ಎಲ್ಲರೂ ಪ್ರಯತ್ನ ಮಾಡೋಣ.

ಶ್ರೀ ಪಿ. ಎನ್. ರೆಡ್ಡಿ.—ಈ ಊಜಿ ನೊಣದ ವಿಚಾರದ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಒಂದು ಸಂಕೀರ್ಣ ಕೊಟ್ಟರು. ಏನೆಂದರೆ ಈ ವಿಚಾರವನ್ನು ಪ್ರಧಾನ ಮಂತ್ರಿಗಳಿಗೂ ಮತ್ತು ವಾಣಿಜ್ಯ ಮಂತ್ರಿಗಳಿಗೂ ತಿಳಿಸಿ ಅವರ ನೆರವನ್ನು ಪಡೆಯುತ್ತೇನೆ ಅನ್ನುವ ಆಶ್ವಾಸನೆಯನ್ನು ಕೊಟ್ಟಿದ್ದರು. ಈ ವಿಷಯವನ್ನು ಅವರು ಕೇಂದ್ರ ಸರ್ಕಾರದ ಮುಂದೆ ತಿಳಿಸಿದ್ದಾರೋ ಇಲ್ಲವೋ ಅನ್ನುವುದನ್ನು ಹೇಳುತ್ತೀರಾ?

ಅಧ್ಯಕ್ಷರು.—ಡೆಲ್ಲಿಗೆ ಹೋಗಿ ಅವರನ್ನು ಕಂಡಿದ್ದೆ ಎಂದು ಮೊದಲೇ ಹೇಳಿದರಲ್ಲಾ.

ಶ್ರೀ ಪಿ. ಎನ್. ರೆಡ್ಡಿ.—ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿ ಈ ಊಜಿ ನೊಣದ ಹಾವಳಿಯನ್ನು ತಡೆಗಟ್ಟುವುದರ ಬಗ್ಗೆ ಸಂಪೂರ್ಣವಾಗಿ ತಿಳಿಸುತ್ತೇನೆಂದು ಅವರು ಹೇಳಿದ್ದರು. ಆ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಸಿಕ್ಕಿಲ್ಲಿಲ್ಲ. ಆದುದರಿಂದ ಕೇಂದ್ರ ಸರ್ಕಾರದ ಮುಂದೆ ಈ ವಿಷಯವನ್ನು ತಿಳಿಸಿದ್ದಾರೋ ಇಲ್ಲವೋ ಅನ್ನುವುದನ್ನು ದಯವಿಟ್ಟು ತಿಳಿಸಬೇಕು ಎಂದು ನಾನು ಮತ್ತೊಮ್ಮೆ ಕೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ಈ ವಿಚಾರದಲ್ಲಿ ನಾನು ಆಗಲೇ ಉತ್ತರ ಹೇಳಿದ್ದೇನೆ. ಮಾನ್ಯ ಮುಖ್ಯ ಮಂತ್ರಿಯವರು ಮೊನ್ನೆ ತಾನೇ ಡೆಲ್ಲಿಗೆ ಹೋಗಿದ್ದಾಗ ಈ ಬಗ್ಗೆ ಸಂಬಂಧಪಟ್ಟ ವಾಣಿಜ್ಯ ಮಂತ್ರಿಯವರಲ್ಲಿ ಪ್ರಸ್ತಾಪ ಮಾಡಿದ್ದಾರೆ.

ಶ್ರೀ ಪಿ. ಎನ್. ರೆಡ್ಡಿ.—ಈ ಬಗ್ಗೆ ಪ್ರಧಾನ ಮಂತ್ರಿಯವರನ್ನು ಭೇಟಿಯಾಗುತ್ತೇನೆಂದು ಅವರು ಹೇಳಿದ್ದರು.

ಶ್ರೀ ಎಂ. ವೀರಪ್ಪ ಮೊಯಿಲಿ.—ಅವರು ಅಲ್ಲಿ ಸಂಬಂಧ ಪಟ್ಟಂತ ಮಾನ್ಯ ಮಂತ್ರಿಯವರ ಜೊತೆಯಲ್ಲಿ ಈ ಬಗ್ಗೆ ಸಾಕಷ್ಟು ರೀತಿಯಲ್ಲಿ ಚರ್ಚೆ ಮಾಡಿದ್ದಾರೆ. ಮತ್ತು ಈ ಬಗ್ಗೆ ಪರಿಹಾರ ಕಾರ್ಯ ಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಒಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಈ ಬಗ್ಗೆ ಕೇಂದ್ರ ಸರ್ಕಾರದವರೂ ಕೂಡ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಿದ್ದಾರೆ.

## Statement by the Chief Minister

*re : issue of Secret Circular*

SRI R. GUNDU RAO.—Sir, I am ready with the statement on the point which Sri C. M. Arumugham had raised. I will read the statement :

Sir, certain newspapers have given considerable publicity to a secret communication stated to have been issued by the DIG (Intelligence) in connection with the postal department.

I would like to emphasis at the outset that this matter which would be covered by the Official Secrets Act and as such it would not be proper to enter into detailed discussion on the matter. However, in order to remove any misunderstandings and misconceptions, I would like to clarify a few points.

Section 26 of the Indian Post Office Act 1898 specifically empowers the State Government or any other officer specially authorised in this behalf by a State Government in the interest of public safety or tranquility may direct by order in writing that postal articles or any class of description of postal articles in the course of transmission by post shall be intercepted or detained or shall be disposed of in such a manner as the authority issuing the order may direct. The hon. member would note that interception of postal articles in the interest of public safety or tranquility is specifically provided for the law. I would also like to draw the attention of the hon. member, under Section 26 (2) of the Indian Post Office Act 1898 which provides for any doubt raised as to whether any act done under Section 26 was in the interest of public safety or tranquility, a certificate by the State Government shall be a conclusive proof on the point. The hon. member would therefore appreciate that once the State Government is satisfied that there is need of exercise of powers under Section 26, there can be no question of re-examination of the